ಡಾ|| ಹೆಚ್.ಸಿ. ಮಹದೇವಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರುಗಳು ಅನೇಕ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ಹಿರಿಯ ಸದಸ್ಯರಾದ ಗೌರವಾನ್ವಿತ ಶಿವಶಂಕರಪ್ಪನವರು ಸಲಹೆಯನ್ನು ಕೊಟ್ಟಿದ್ದಾರೆ. ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಉಚಿತವಾಗಿ ಔಷಧಿಯನ್ನು ಕೊಡಲು ಸರ್ಕಾರಕ್ಕೆ ಕಷ್ಟವಾಗುವುದಿಲ್ಲ. ಆದರೆ ಸನ್ಮಾನ್ಯ ಸದಸ್ಯರಾದ ಶಿವಶಂಕರಪ್ಪರಂಥ ಸಮರ್ಥರಾದಂಥವರ ಸಹಾಯ ರಾಜ್ಯದ ಎಲ್ಲಾ ಜನರಿಗೆ ಔಷಧಿಯನ್ನು ಕೊಡಲು ಆಗತ್ಯವಾಗ ಬೇಕಾಗಿದೆ, ಅವರ ನೇತ್ರತ್ವದಲ್ಲಿ ರಾಜ್ಯದ ಎಲ್ಲಾ ಜನರಿಗೆ ಸರ್ಕಾರದ ಕ್ರಮದ ಜೊತೆಗೆ ಔಷಧಿಯನ್ನು ಕೊಡಲು ಸಹಾಯವನ್ನು ಅವರು ಕೊಡಬೇಕೆಂದು ತಮ್ಮ ಮೂಲಕ ಅವರನ್ನು ವಿನಂತಿಸುತ್ತೇನೆ.

ಶ್ರೀ ಶಾಮನೂರು ಶಿವಶಂಕರಪ್ಪ : ಬೇರೆ ರಾಷ್ಟ್ರಗಳಲ್ಲಿ ಸರ್ಕಾರವೇ ಆರೋಗ್ಯದ ಬಗ್ಗೆ ಹೊಣೆ ಹೊರುತ್ತದೆ ಎನ್ನತಕ್ಕ ಅಭಿಪ್ರಾಯವನ್ನು ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಎಲ್ಲರಿಗೂ ಔಷಧಿಯನ್ನು ಕೊಡಿ ಎಂದು ಹೇಳುತ್ತಿಲ್ಲ. ನನ್ನನ್ನು ಮುಖ್ಯಮಂತ್ರಿಯಾಗಿ ಮಾಡಿ ಆಗ ನಾನು ಆ ಕೆಲಸವನ್ನು ಮಾಡುತ್ತೇನೆ.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಸದಸ್ಯರಾದ ಗುರುಪಾದಪ್ಪ ನಾಗಮಾರಪಲ್ಲಿಯವರು ಪ್ರಸ್ತಾಪ ಮಾಡಿದಂಥ ಆಯುರ್ವೇದ ವೈದ್ಯರ ಬಗ್ಗೆ ಸಂಬಂಧಪಟ್ಟಂತೆ ಈಗಾಗಲೇ ಲೋಕಸೇವಾ ಆಯೋಗದಿಂದ ಸುಮಾರು 75 ಜನ ಆಯುರ್ವೇದಿಕ್ ವೈದ್ಯರ ನೇಮಕಾತಿಯಾಗಿದೆ. ಅವರುಗಳಿಗೆ ಸ್ಥಳಗಳನ್ನು ಸೂಚಿಸಲು ಕ್ರಮ ತೆಗೆದುಕೊಳುತ್ತಿದ್ದೇವೆ. ಅದರ ಜೊತೆಗೆ ಇನ್ನೂ ವೈದ್ಯರ ಕೊರತೆ ಇದೆ. ಆದ್ಯತ್ಯೆಯ ಮೇಲೆ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

(ಗೊಂದಲ)

ಉಪಾಧ್ಯಕ್ಷರು : ಸದಸ್ಯರುಗಳು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಈ ಸಮಸ್ಯೆಯ ಗಂಭೀರತೆಯನ್ನು ನೋಡಿ ಸಾಕಷ್ಟು ಜನರಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಇದು ಇಡೀ ರಾಜ್ಯದ ಪ್ರಶ್ನೆಯೆಂದು ಸಾಕಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ಬಹುಶಃ ಇಷ್ಟು ದಿವಸಗಳಲ್ಲಿ ಇಷ್ಟು ಅವಕಾಶ ಮಾಡಿಕೊಟ್ಟಿದ್ದುದು ಯಾವಾಗಲೂ ಆಗಿಲ್ಲ.

ಡಾ: ಯು. ಚಿತ್ತರಂಜನ್ : ಮಂತ್ರಿಗಳು ಉತ್ತರವನ್ನು ಕೊಡುವಾಗ ಸ್ಪೆಸಿಫಿಕ್ ಆಗಿ ಕೊಡಬೇಕು.

ಸೋಮವಾರಪೇಟೆ ತಾಲ್ಲೂಕಿನ ಕಿರಿಯ ಕಾಲೇಜುಗಳು

104 – ಶ್ರೀ ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕಿನಲ್ಲಿರುವ ಸರ್ಕಾರಿ ಕಿರಿಯ ಒಟ್ಟು ಕಾಲೇಜುಗಳೆಷ್ಟು? (ಹೆಸರುಗಳನ್ನು ನೀಡುವುದು)

ಆ) ಈ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಶಿಕ್ಷಕರ ಹಾಗೂ ಶಿಕ್ಷಕೇತರ ಹುದ್ದೆಗಳೆಷ್ಟು? (ಪ್ರತಿ ಕಿರಿಯ ಕಾಲೇಜಿನ ಬಗ್ಗೆ ಮಾಹಿತಿ ನೀಡುವುದು)

ಇ) ಈ ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸೋಮವಾರಪೇಟೆ ತಾಲ್ಲೂಕಿನಲ್ಲಿ 3 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ. ಕಾಲೇಜುಗಳಿರುವ ಸ್ಥಳಗಳೆಂದರೆ;

1) ಸೋಮವಾರಪೇಟೆ
2) ಶಿರಂಗಾಲ ಮತ್ತು
3) ಆಲೂರು ಸಿದ್ದಾಪುರ

ಆ) ಮೂರು ಕಾಲೇಜುಗಳಲ್ಲಿರುವ ಖಾಲಿ ಹುದ್ದೆಗಳ ವಿವರ :

		ಬೋಧಕವರ್ಗ	*ಬೋಧಕೇತರ ವರ್ಗ*
1)	**ಸೋಮವಾರ ಪೇಟೆ :**		
	ಕನ್ನಡ ಉಪನ್ಯಾಸಕ	1	
	ಅರ್ಥಶಾಸ್ತ್ರ ಉಪನ್ಯಾಸಕ	1	
	ಅಟೆಂಡರ್		1
	ಡಿ ದರ್ಜೆ		1
2)	**ಆಲೂರು ಸಿದ್ದಾಪುರ**		
	ಕನ್ನಡ ಉಪನ್ಯಾಸಕರು	1	
	ಆಂಗ್ಲ ಉಪನ್ಯಾಸಕರು	1	
	ಇತಿಹಾಸ ಉಪನ್ಯಾಸಕರು	1	
	ಅಟೆಂಡರ್		1
3)	**ಶಿರಂಗಾಲ :**		
	ರಾಜ್ಯಶಾಸ್ತ್ರ ಉಪನ್ಯಾಸಕ	1	
	ಡಿ. ದರ್ಜೆ		1

೫) ವಿದ್ಯಾರ್ಥಿಗಳಿಗೆ ತೊಂದರೆಯಾದ ಬಗ್ಗೆ ಸರ್ಕಾರದ ಗನಮಕ್ಕೆ ಬಂದಿದೆ. ರಾಜ್ಯದಲ್ಲಿ ಖಾಲಿಯಿರುವ 864 ಉಪನ್ಯಾಸಕರ ಹುದ್ದೆಗಳನ್ನು ತುಂಬುವ ಸಲುವಾಗಿ ಕರ್ನಾಟಕ ಲೋಕಸೇವಾ ಆಯೋಗದಿಂದ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆ ನೀಡುವ ಮೂಲಕ ಪ್ರಕ್ರಿಯೆ ಪ್ರಾರಂಭವಾಗಿದೆ. ಆಯ್ಕೆ ಪಟ್ಟಿ ಪ್ರಕಟಗೊಂಡ ಕೂಡಲೇ ಸದರಿ ಹುದ್ದೆಗಳನ್ನು ತುಂಬಲಾಗುವುದು. ಬೋದಕೇತರ ಹುದ್ದೆಗಳನ್ನು ತುಂಬುವ ಬಗ್ಗೆ ಈಗ ಆರ್ಥಿಕ ಮಿತವ್ಯಯದ ಆದೇಶವು ಜಾರಿಯು ಇರುವುದರಿಂದ ಈ ಆದೇಶವನ್ನು ಸಡಿಸಗೊಳಿಸಿದ್ದು. ಕೂಡಲೇ ಬೋಧಕೇತರ ಹುದ್ದೆಗಳಿಗೆ ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಅಪ್ಪಚ್ಚುರಂಜನ್ : ಸನ್ಮಾನ್ಯ ಉಪಾಧ್ಯಕ್ಷರೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು ರಾಜ್ಯದಲ್ಲಿ 864 ಉಪನ್ಯಾಸಕರ ಹುದ್ದೆ ಖಾಲಿ ಇದೆ. ಅದನ್ನು ಆದಷ್ಟು ಬೇಗ ತುಂಬುತ್ತೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ನಮ್ಮ ಸೋಮವಾರಪೇಟೆ ಕ್ಷೇತ್ರದಲ್ಲಿ ಆಲೂರು ಸಿದ್ಧಾಪುರ, ಸಿರಂಗಾಲ ಮತ್ತು ಸೋಮವಾರಪೇಟೆಯಲ್ಲಿ ಆರು ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ ಖಾಲಿ ಇರುವ ಉಪನ್ಯಾಸಕರ ಹುದ್ದೆಯನ್ನು ಯಾವಾಗ ತುಂಬುತ್ತೀರಿ? ಆಲೂರು ಸಿದ್ದಾಪುರದಲ್ಲಿ ಈಗಾಗಲೇ ಪ್ರಾಚಾರ್ಯರ ಹುದ್ದೆ ಖಾಲಿ ಇದೆ, ಮತ್ತು ಮೊನ್ನೆ ಸಿರಂಗಾಲದಲ್ಲಿ ಗ್ರಾಮಾಂತರ ಕಾಲೇಜಿನಿಂದ ನಗರಕ್ಕೆ ವರ್ಗಾವಣೆ ಮಾಡಿ ಅಲ್ಲಿ ಖಾಲಿ ಬಿದ್ದಿರುವ ಪ್ರಾಚಾರ್ಯರ ಹುದ್ದೆಯನ್ನು ತುಂಬಿರುವುದಿಲ್ಲ. ಅದನ್ನು ಯಾವಾಗ ಮಾಡುತ್ತೀರಿ ಎನ್ನುವ ಬಗ್ಗೆ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಉಪಾಧ್ಯಕ್ಷರೆ, ಈಗಾಗಲೇ ಮಾಹಿತಿಯನ್ನು ಕಳುಹಿಸಿಕೊಟ್ಟಿರುವ ಪ್ರಕಾರ ಆರು ಹುದ್ದೆಗಳು ಖಾಲಿ ಇವೆ. ನಾವು 864 ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಲೋಕಸೇವಾ ಆಯೋಗಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅವರು ಪ್ರೊಸೆಸ್ ಮಾಡುತ್ತಿದ್ದಾರೆ. ತುಂಬಾ ಕಡೆ ಪದವಿಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರು ಇಲ್ಲ. ಆದಷ್ಟು ಜಾಗ್ರತೆ ಮಾಡಬೇಕೆಂದೂ ಸಹ ಕೇಳಿಕೊಂಡಿದ್ದೇವೆ. ಲೋಕಸೇವಾ ಆಯೋಗದವರು ತೀರ್ಮಾನ ಮಾಡಿ ಕಳುಹಿಸಿದ ತಕ್ಷಣ ಈ ಆರು ಹುದ್ದೆಗಳನ್ನು ಭರ್ತಿ ಮಾಡತಕ್ಕ ವ್ಯವಸ್ಥೆ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಅಪ್ಪಚ್ಚುರಂಜನ್ : ಗ್ರಾಮಾಂತರ ಪ್ರದೇಶದಿಂದ ವರ್ಗಾವಣೆ ಮಾಡಿ ಅಲ್ಲಿ ಖಾಲಿ ಇರುವ ಪ್ರಾಚಾರ್ಯರ ಹುದ್ದೆಗೆ, ಮತ್ತು ಉಪನ್ಯಾಸಕರ ಹುದ್ದೆಯನ್ನು ತುಂಬದೆ ಆ ಮೂಲಕ ಗ್ರಾಮಾಂತರ ಪ್ರದೇಶವನ್ನು ಕಡೆಗಾಣಿಸುತ್ತಿರುವುದೇಕೆ ಎಂದು ಕೇಳುತ್ತಿದ್ದೇನೆ.

ಶ್ರೀ ಹೆಚ್.ಕೆ. ಗೋವಿಂದೇಗೌಡ : ಉಪಾಧ್ಯಕ್ಷರೆ, ಸಾಮಾನ್ಯವಾಗಿ ಎಲ್ಲಿ ಉಪಾಧ್ಯಾಯರುಗಳ ಸಂಖ್ಯೆ ಜಾಸ್ತಿ ಇರುತ್ತದೆ ಅಲ್ಲಿಂದ ಎಲ್ಲಿ ಅವಶ್ಯಕತೆ ಇದೆ ಅಂಥಹ ಕಡೆಗೆ ಎರವಲು ಸೇವೆಯಮೇಲೆ ಕಳುಹಿಸುವ ವ್ಯವಸ್ಥೆ ಮಾಡಿದ್ದೇವೆ. ಏಕೆಂದರೆ ಉಪಾಧ್ಯಾಯರ ಕೊರತೆಯಿಂದ ಶಾಲೆಗಳಿಗೆ ತೊಂದರೆಯಾಗಬಾರದು. ಆ ದೃಷ್ಟಿಯಿಂದ ಉಪಾಧ್ಯಾಯರ ಸಂಖ್ಯೆ ಕಡಿಮೆ ಇರುವ ಕಡೆಗೆ ಜಾಸ್ತಿ

ಇರುವ ಕಡೆಯಿಂದ ಉಪಾಧ್ಯಾಯರನ್ನು ಕಳುಹಿಸಿ ಕಾಲೇಜು ನಡೆಯಲಿ ಎಂದು ಆ ರೀತಿ ಮಾಡಿದ್ದೇವೆ. ಆದರೆ ಪಟ್ಟಣದಲ್ಲಿರುವ ಕಾಲೇಜುಗಳಿಗೆ ಉಪನ್ಯಾಸಕರನ್ನು ಕೊಡಬೇಕು, ಗ್ರಾಮಾಂತರ ಪ್ರದೇಶವನ್ನು ಕಡೆಗಣಿಸಬೇಕು ಎನ್ನತಕ್ಕ ಉದ್ದೇಶ ಮಾತ್ರ ಇಲ್ಲಿ ಇಲ್ಲ. ಆ ರೀತಿ ಆದೇಶವನ್ನೂ ಸಹ ಕೊಟ್ಟಿಲ್ಲ. ಇದು ತಾತ್ಕಾಲಿಕವಾಗಿ ಮಾಡಿರತಕ್ಕ ವ್ಯವಸ್ಥೆ. ಲೋಕಾಯುಕ್ತದವರು 865 ಉಪನ್ಯಾಸಕರ ಹುದ್ದೆಗಳಿಗೆ ಆಯ್ಕೆ ಮಾಡಿ ಕಳುಹಿಸಿದ ತಕ್ಷಣ ಇವರನ್ನು ವಾಪಸ್ ಕರೆಯಿಸಿಕೊಂಡು ಅಲ್ಲ ಬೇರೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉಪಾಧ್ಯಕ್ಷರೇ, ತಾವು 864 ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಕೆ.ಪಿ.ಎಸ್.ಸಿಗೆ ಕೇಳಿದ್ದೇವೆಂದು ಹೇಳಿದ್ದೀರಿ. ಇದಕ್ಕೆ ಕೆಲವಾರು ತಿಂಗಳು ತೆಗೆದುಕೊಳ್ಳಬಹುದು. ಈಗ ಪ್ರಥಮ ಧರ್ಜೆ ಕಾಲೇಜಿನಲ್ಲಿ ಗುತ್ತಿಗೆ ಆಧಾರದ ಮೇಲೆ 900 ಜನ ಕೆಲಸ ಮಾಡುತ್ತಿದ್ದಾರೆ. ಅವರನ್ನು ಕಿರಿಯ ಕಾಲೇಜುಗಳಿಗೆ ನೇಮಕ ಮಾಡಿಕೊಳ್ಳುವ ಬಗ್ಗೆ ತಾವು ನಿರ್ಧಾರವನ್ನು ತೆಗೆದುಕೊಂಡರೆ, ತಾತ್ಕಾಲಿಕವಾಗಿ ಇಡೀ ರಾಜ್ಯಗಳಲ್ಲಿ ಕಿರಿಯ ಕಾಲೇಜುಗಳಲ್ಲೇನು ಉಪನ್ಯಾಸಕರ ಸಮಸ್ಯೆ ಇದೆ ಅದು ಬಗೆಹರಿಯುತ್ತದೆ. ಇಲ್ಲದಿದ್ದರೆ, ಈಗಾಗಲೇ ಎರಡುಮೂರು ತಿಂಗಳುಗಳಾಗಿದೆ. ಇಡೀ ರಾಜ್ಯದಲ್ಲಿ ಆ ಸಮಸ್ಯೆ ಇದೆ. ನಮ್ಮ ಶಿರಾಳಕೊಪ್ಪದಲ್ಲಿ ಹೆಣ್ಣುಮಕ್ಕಳ ಕಿರಿಯ ಕಾಲೇಜು ಇದೆ, ಅಲ್ಲಿ ಉಪನ್ಯಾಸಕರ ಹುದ್ದೆಯನ್ನು ಭರ್ತಿ ಮಾಡಿಲ್ಲ. ಹೀಗೆ ಎಲ್ಲಾ ಕಡೆ ಅದೇ ಸಮಸ್ಯೆ ಇದೆ. ಆದ್ದರಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಪ್ರಥಮ ದರ್ಜೆ ಕಾಲೇಜಿನ 900 ಶಿಕ್ಷಕರನ್ನು ನಿಮ್ಮ ಕಡೆ ತೆಗೆದುಕೊಳ್ಳಲು ಸಾಧ್ಯವಾದರೆ, ಅದರ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಂಡರೆ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ. ತಾವು ಅದರ ಬಗ್ಗೆ ಯೋಚನೆ ಮಾಡುತ್ತೀರೋ ?

12.40 ಪಿ.ಎಂ

ಶ್ರೀ ಹೆಚ್.ಜಿ. ಗೋವಿಂದೇಗೌಡ : ಹಿರಿಯ ಕಾಲೇಜುಗಳಲ್ಲಿ ಇರತಕ್ಕಂತಹವನ್ನು ಪೂರ್ಣವಾಗಿ ತೆಗೆದುಕೊಳ್ಳುವ ನಿರ್ಧಾರ ನಾವು ಕೈಗೊಂಡಿಲ್ಲ. ಸದ್ಯಕ್ಕೆ 864ಕ್ಕೆ ನಾವು ಈಗಾಗಲೇ ಕೇಳಿದ್ದೇವೆ. ಲೋಕಸೇವಾ ಆಯೋಗಕ್ಕೆ ಕೇಳಿ ಕಳುಹಿಸಿರುವುದರಿಂದ ಅವರು ಪ್ರೋಸೆಸ್ ಪ್ರಾರಂಭ ಮಾಡಿದ್ದರಿಂದ ಅವರನ್ನು ತಾತ್ಕಾಲಿಕವಾಗಿ ನಾವು ಹಿರಿಯ ಕಾಲೇಜಿನಿಂದ ಕಿರಿಯ ಕಾಲೇಜಿಗೆ ತೆಗೆದುಕೊಂಡರೆ ಮತ್ತೆ ಕಾಂಪ್ಲಿಕೇಷನ್ ಪ್ರಾರಂಭವಾಗುತ್ತದೆ. ಆದ್ದರಿಂದ ಈ ಲೆಕ್ಚರರ ಬಗ್ಗೆ ಆದಷ್ಟು ಜಾಗ್ರತೆಯಾಗಿ ನೇಮಕ ಮಾಡತಕ್ಕಂತಹ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಯಾರು ಇವತ್ತು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಸುಮಾರು 900 ಜನ ಕೆಲಸ ಮಾಡುತ್ತಿದ್ದಾರೆ ಅವರನ್ನು ಅಲ್ಲಿ ಖಾಯಂ ಮಾಡುವುದಕ್ಕೆ ಆಗದೇ ಇರುವುದು ಉಸಿರು ಕಟ್ಟುವಂತಹ ಪರಿಸ್ಥಿತಿ ಇದೆ. ಅವರು ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಎಲ್ಲಿ ಆದರೂ ಮಾಡಿಕೊಳ್ಳಿ, ಅಲ್ಲಿ ಅಗತ್ಯ ಇಲ್ಲದೆ ಇದ್ದರೆ ಮತ್ತೆ ಏಕೆ ಕೆ.ಪಿ.ಎಸ್.ಸಿ.ಗೆ ಹೋಗುತ್ತೀರಿ, ಅವರನ್ನು ಮತ್ತೆ ತೆಗೆದುಕೊಂಡರೆ ಈ ಸಮಸ್ಯೆ ಪರಿಹರಿಸಬಹುದು. ದಯಮಾಡಿ

ಹೇಳಿ; ಏಕೆಂದರೆ ಇಬ್ಬರು ಸಚಿವರೂ ಇಲ್ಲಿ ಇರುವುದರಿಂದ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಸರ್ಕಾರದ ಒಂದು ನಿರ್ಧಾರವಾಗಬೇಕು.

ಡಾ॥ಹೆಚ್.ಸಿ. ಮಹದೇವಪ್ಪ : ತಾವು ಹೇಳಿದ್ದುದು ಅರ್ಥವಾಗಿದೆ. ಲೋಕಸೇವಾ ಆಯೋಗವಾದ ನೇಮಕ ಮಾಡಿಕೊಳ್ಳುವಂತಹ ಪ್ರೊಸೆಸ್ ನಡೆಯುತ್ತಾ ಇರುವುದರಿಂದ ಸಾಧ್ಯವಾದಷ್ಟು ಜಾಗ್ರತೆಯಾಗಿ ನೇಮಕ ಮಾಡಿಕೊಳ್ಳುವಂತಹ ವ್ಯವಸ್ಥೆ ಮಾಡುತ್ತೇವೆ.

ರಾಜ್ಯದಲ್ಲಿ 95-96ನೇ ಸಾಲಿನಲ್ಲಿ ಹೊಸದಾಗಿ ಆಸ್ಪತ್ರೆಗಳ ಮಂಜೂರಾತಿ.

105 - ಶ್ರೀ ಜಿ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಆಸ್ಪತ್ರೆ ಪ್ರಾರಂಭಿಸಲು ಸರ್ಕಾರದವರು ಎನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ?

ಆ) ಹಾಗಿದ್ದಲ್ಲಿ ಪ್ರತಿ ಜಿಲ್ಲೆಗೆ ಹೊಸದಾಗಿ ಎಷ್ಟೆಷ್ಟು ಹೊಸ ಆಸ್ಪತ್ರೆಗಳನ್ನು ಮಂಜೂರು ಮಾಡಲಾಗುವುದು?

ಇ) ವಿಜಾಪುರ ಜಿಲ್ಲಾ ಬೀಳಗಿ, ಮತ ಕ್ಷೇತ್ರದಲ್ಲಿ ಎಷ್ಟು ಹೊಸ ಆಸ್ಪತ್ರೆಗಳನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರು?

ಈ) ಕಳೆದ ನಾಲ್ಕು ವರ್ಷಗಳಿಂದ ಬೀಳಗಿ ಮತ ಕ್ಷೇತ್ರದ ಜಮಖಂಡಿ ತಾಲ್ಲೂಕಿನ ಗೋಟೆ ಗ್ರಾಮದವರು ಎಲ್ಲಾ ಸೌಲಭ್ಯಗಳನ್ನು ಪೂರೈಸಿದ್ದರೂ ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿಲ್ಲದಿರುವುದು ನಿಜವೇ? ಹಾಗಿದ್ದಲ್ಲಿ ಈ ವರ್ಷದಲ್ಲಿ ಆಸ್ಪತ್ರೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 50 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಾಗೂ 10 ಸಮುದಾಯ ಆರೋಗ್ಯ ಕೇಂದ್ರಗಳನ್ನು 95-96ನೇ ಸಾಲಿನಲ್ಲಿ ಮಂಜೂರು ಮಾಡುವ ಗುರಿಯನ್ನು ಹೊಂದಲಾಗಿದೆ.

ಆ) ಜಿಲ್ಲಾವಾರು ಗುರಿಯ ಪಟ್ಟಿಯನ್ನು ಲಗತ್ತಿಸಿದೆ.

ಇ) ಸ್ಥಳವನ್ನು ನಿಗದಿಪಡಿಸಿರುವುದಿಲ್ಲ.

ಈ) ಕಳೆದ ಆರ್ಥಿಕ ಸಾಲಿನಲ್ಲಿ ಪ್ರಸ್ತಾವನೆ ಬಂದಿರು ಸರ್ಕಾರದಿಂದ ಮಂಜೂರಾತಿ ದೊರೆತಿಲ್ಲ. ಈ ಸಾಲಿನಲ್ಲಿ ಜಿಲ್ಲಾ ಪಂಚಾಯತ್‌ನಿಂದ ಪ್ರಸ್ತಾವನೆ ಬಂದರೆ ಪರಿಶೀಲಿಸಲಾಗುವುದು.